

ಹೋಯಿತು. ತಕ್ಷಣದ ಅಂತಃಸ್ಫುರಣದಿಂದ, ಆ ಬಿಸುಗಂಬನಿಯನ್ನು ತನ್ನೆರಡೂ ಕೈಗಳಿಂದ ಒರೆಸಲು ಅವರು ಮುಂದಾದರು! ಒಡೆಯನ ಈ ಅನಿರೀಕ್ಷಿತ ನಡೆಯಿಂದ ಗಲಿಬಿಲಿಗೊಂಡ ದೇವಿಯ ಕೈಯಲ್ಲಿಯ ಚಿಮಣಿ ಹಿಡಿತ ತಪ್ಪಿ ನೆಲಕ್ಕುರುಳಿತು... ತಟ್ಟನೆ ಅದನ್ನೆತ್ತಲೆಂದು ಬಗ್ಗಿದ ಆಕೆ, ಆಯತಪ್ಪಿ ಮುಗ್ಗರಿಸುತ್ತಲೇ ಅವಳನ್ನು ಆದರಿಸಲೆಂದು ವಾಸುದೇವರೂ ಕೈ ಚಾಚಿದರು. ಅವಸರದ ಈ ಅವಘಡದಿಂದಾಗಿ ದೇವಿ, ಅನಾಮತ್ತು ವಾಸುದೇವರ ತೆಕ್ಕೆಗೆ ಬಂದು ಬಿದ್ದು ಬಿಟ್ಟಿದ್ದಳು!

ಅಂತರಾಳದಲ್ಲಿ ಗುಪ್ತವಾಗಿ ಅನುರಕ್ತವಾಗಿದ್ದ ಎರಡು ಏರುಜವ್ವನದ ಜೀವಗಳಿಗೆ ಈ ಆಕಸ್ಮಿಕ ಘಟನೆ, ಪರಸ್ಪರ ಅರ್ಪಿಸಿಕೊಳ್ಳಲು ಅಯಾಚಿತವಾದ ಒಂದು ಸನ್ನಿವೇಶವನ್ನು